ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ.ನಂ. 2794/2016

ಸರ್ಕಾರದ ಪರ ಕುಂದಾಪುರ ಠಾಣಾ ಪೋಲೀಸರು .... ಪಿರ್ಯಾದುದಾರರು

: ವಿರುದ್ಧ :

ರಮೇಶ ಎಸ್. 44 ವರ್ಷ,
ತಂದೆ: ದಿ. ಸಿದ್ದ ಆಚಾರ್,
ವಾಸ: ನಂಬ್ರ 18, 2ನೇ ತಿರುವು,
ಅನುಭವ ನಗರ, ನಾಗರಬಾವಿ,
ಬೆಂಗಳೂರು-72 ..... ಆರೋಪಿತರು

<u>ದೋಷಾರೋಪಣೆ</u>

ಶ್ರೀ ಶ್ರೀಕಂಠ ಎನ್.ಎ., ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ

ಸಾಕ್ಷಿ1/ಶ್ರೀಮತಿ ಜ್ಯೋತಿ ಇವರು ಆರೋಪಿತರಾದ ನಿಮ್ಮನ್ನು ದಿ.18.11.2005 ರಂದು ಕುಂದಾಪುರ ತಾಲೂಕಿನ ಕೋಟೇಶ್ವರದಲ್ಲಿರುವ ಶ್ರೀ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಜಾತಿ ಪದ್ದತಿಯಂತೆ ಮದುವೆಯಾಗಿದ್ದು, ಮದುವೆಯ ಸಮಯ ಆರೋಪಿತರಾದ ನೀವು ಸಾಕ್ಷಿ 1ನೇಯವರ ಮನೆಯವರಿಂದ ವರದಕ್ಷಿಣೆ ರೂಪದಲ್ಲಿ 2,00,000/- ರೂಪಾಯಿ ಹಣವನ್ನು ಹಾಗೂ 24 ಪವನ್ ಚಿನ್ನಾಭರಣಗಳನ್ನು ಒತ್ತಾಯ ಪೂರ್ವಕವಾಗಿ ಪಡೆದಿದ್ದು ಮದುವೆಯ ನಂತರ ಆಪಾದಿತರಾದ ನೀವು ಸಾಕ್ಷಿ 1ನೇಯವರನ್ನು ನಿಮ್ಮ ಮನೆಯಾದ ಬೆಂಗಳೂರಿನ ನಾಗರಬಾವಿ ಅನುಭವನಗರ 2ನೇ ಕ್ರಾಸ್ ಎಂಬಲ್ಲಿ ವಾಸವಿದ್ದು ಮದುವೆಯಾದ 2 ತಿಂಗಳ ನಂತರ ದಿ. 27.01.2006 ರಂದು ಆರೋಪಿತರಾದ ನೀವು ಸಾಕ್ಷಿ 1ನೇಯವರಿಗೆ ನೀನು ಮತ್ತು ನಿನ್ನ ಮನೆಯವರು ಸರಿ ಇಲ್ಲಾ ನಾವು ಕೇಳಿದಷ್ಟು ವರದಕ್ಷಿಣೆ ಕೊಟ್ಟಿಲ್ಲ, ವರದಕ್ಷಿಣೆ ತಂದಿದ್ದು ಕಮ್ಮಿಯಾಯಿತು ತವರು ಮನೆಗೆ ಹೋಗಿ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹಾಗೂ ಅವಾಚ್ಯ ಶಬ್ದದಿಂದ ಬೈದು ಕೈಯಿಂದ ಹೊಡೆದು ಸಾಕ್ಷಿ 1ನೇಯವರಿಗೆ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದು ಮನೆಗೆ ಸೇರಿಸುವುದಿಲ್ಲವೆಂದು ಬೆದರಿಕೆ ಹಾಕಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

2. ಮೇಲ್ಕಂಡ ಅವಧಿ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವ ಸಾಕ್ಷಿ1/ಶ್ರೀಮತಿ ಜ್ಯೋತಿಯವರನ್ನುದ್ದೇಶಿಸಿ 1ನೇ ಆರೋಪಿತರಾದ ನೀವು "ಸೂಳೆ, ರಂಡೆ, ಲೋಫರ್ ಮುಂಡೆ, ಬೇವಾರ್ಶಿ" ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಅವರನ್ನು ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿ ಆ ಮೂಲಕ ಭಾರತೀಯ

ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

3. ಮೇಲ್ಕಂಡ ಅವಧಿ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು 2015 ರಲ್ಲಿ ಸಾಕ್ಷಿ1ಯವರಿಗೆ ಸ್ವಇಚ್ಛೆಯಿಂದ ಕೈಗಳಿಂದ ಕೆನ್ನೆಗೆ, ಮುಖಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

4. ಮೇಲ್ಕಂಡ ಅವಧಿ ಹಾಗೂ ಸ್ಥಳದಲ್ಲಿ, ಆಪಾದಿತರಾದ ನೀವು ಸಾಕ್ಷಿ1ಯವರನ್ನುದ್ದೇಶಿಸಿ '2,00,000/- ರೂಪಾಯಿ ವರದಕ್ಷಿಣೆ ಹಣವನ್ನು ಹೆಚ್ಚಿಗೆ ಹಣ ತರದಿದ್ದರೆ ನಿನ್ನನ್ನು ನನ್ನ ಮನೆಗೆ ಸೇರಿಸಿಕೊಳ್ಳುವುದಿಲ್ಲ ನಾನು ಬೇರೆ ಹುಡುಗಿಯನ್ನು ಮದುವೆಯಾಗುತ್ತೇನೆ ಮದುವೆಗೆ ಅಡ್ಡ ಬಂದರೆ ನಿನ್ನನ್ನು ಹಾಗೂ ನಿನ್ನ ತಾಯಿ, ಸಹೋದರನನ್ನು ಕೊಂದೇ ಮುಗಿಸುತ್ತೇನೆ' ಎಂದು ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

5. ಮೇಲ್ಕಂಡ ಅವಧಿ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿ 1 ನೇಯವರಲ್ಲಿ 2,00,000/- ಹಣ ಮತ್ತು 24 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಪಡೆದಿದ್ದು ಹಾಗೂ 2,00,000/- ರೂಪಾಯಿ ಹಣವನ್ನು ಹೆಚ್ಚಿನ ವರದಕ್ಷಿಣೆಯಾಗಿ ತವರು ಮನೆಯಿಂದ ತರುವಂತೆ ಬೇಡಿಕೆಯಿಟ್ಟಿದ್ದು ಹಾಗೂ ಪಡೆದುಕೊಂಡ ವರದಕ್ಷಿಣೆ ಹಣ ಮತ್ತು ಚಿನ್ನವನ್ನು ಸಾಕ್ಷಿ 1ನೇಯವರಿಗೆ ವ್ಯಯ ಮಾಡದೆ ಹಿಂದಿರುಗಿಸದೆ ಇದ್ದು ಆ ಮೂಲಕ ವರದಕ್ಷಿಣೆ ನಿಷೇಧ ಕಾಯಿದೆಯ ಕಲಂ 3, 4, 6 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 26.12.2018

(ಶ್ರೀಕಂಠ ಎನ್.ಎ.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ

Phs